**CC 576/2023. PW-1.**

<u>ಸಾಕ್ಷಿಯನ್ನು ಇಂದು ದಿನಾಂಕಃ **25/05/2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>**ಸಾಕ್ಷಿಯ ಮುಖ್ಯ ವಿಚಾರಣೆ: ಫಿರ್ಯಾದಿ ಪರ ಶ್ರೀ: ಎಸ್.ವಿ.ಎಸ್. ವಕೀಲರಿಂದ:**</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳ ದೃಢೀಕೃತ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಷಾನೆಗೊಳಿಸುವಂತೆ ಕೋರುತ್ತೇನೆ.

1. ದಿಃ 04/05/2021 ರೂ. 1,00,000/- ಕ್ಕೆ ಸಂಬಂದಿಸಿದಂತೆ ಎಸ್.ಬಿ.ಐ. ಬೀದರ ಶಾಖೆಯ ಚೆಕ್ ಸಂಖ್ಯೆ- 382627 ರ ಮೂಲ ಚೆಕನ್ನು ನಿಪಿ-1 ಎಂದು ಗುರ್ತಿಸಲಾಯಿತು, ಆರೋಪಿ ಸಹಿಯನ್ನು <u>ನಿಪಿ-**1** ಎ, ಎಂದು</u> ಗುರ್ತಿಸಲಾಯಿತು.

2. ಹಿಂಬರಹವನ್ನು <u>ನಿಪಿ-**2** ಎಂದು</u> ಗುರುತಿಸಲಾಯಿತು.

3. ಆರೋಪಿಗೆ ವಕೀಲರ ಮುಖಾಂತರ ನೀಡಿರುವ ನೊಟಿಸಿನ ಕಚೇರಿಯ ಪ್ರತಿಯನ್ನು <u>ನಿಪಿ-**3** ಎಂದು</u> ಗುರ್ತಿಸಲಾಯಿತು.

4. ಅಂಚೇ ರಸೀದಿಯನ್ನು <u>ನಿಪಿ-**4** ಎಂದು</u> ಗುರ್ತಿಸಲಾಯಿತು.

5. Addressy Refused ಎಂಬ ಹಿಂಬರಹದೊಂದಿಗೆ ಜಾರಿಯಾಗದೇ ಬಂದ ಅಂಚೆ ಲಕೋಟೆಯನ್ನು <u>ನಿಪಿ-**5** ಎಂದು</u>, ತೆರೆದ ನ್ಯಾಯಾಲಯದಲ್ಲಿ ಮೂಲ ನೋಟಿಸನ್ನು <u>ನಿಪಿ-**5** ಎ,</u> ಎಂದು ಗುರ್ತಿಸಲಾಯಿತು.

ಆದ್ದರಿಂದ ದೂರಿನಲ್ಲಿ ಕೋರಿಕೊಂಡಂತೆ ಆದೇಶ ಮಾಡಲು ಪ್ರಾರ್ಥನೆ.

ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).

**(ಓ.ಹೇ.ಕೇ.ಸ.ಇದೆ.)**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ.ಎಫ.ಸಿ ನ್ಯಾಯಾಲಯ ಬೀದರ